ಶ್ರೀ ಎಂ. ಮಲ್ಲಪ್ಪ.—ಮೊದಲನೆಯ ಪ್ರಶ್ನೆಗೆ ಬಂದಿದೆ ಎಂದು ಉತ್ತರ ಹೇಳಿದ್ದೀರಿ. ಹಾಗಾದರೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

† ಶ್ರೀ ಬನವರಾಜ ಮಾಗಾವಿ.—ಇಪ್ಪತ್ತು ಸಾವಿರ ರೂಪಾಯಿ ಎಸ್ಟಿಮೇಟು ಮಾಡಿದ್ದೇವೆ. ಬ್ಯಾಡಗಹಳ್ಳಿಯಿಂದ ಮುಂದಿನ ಒಂದು ಮೈಲಿನಲ್ಲಿ ಒಂದು ಬ್ರಿಜ್ ಇದೆ, ಇಲ್ಲಿ ಒಂದು ಹೈ ಲೆವೆಲ್ ಕಾಸ್‌ವೇ ಮಾಡಬೇಕಾಗಿದೆ, ಆದರೆ ಹಣದ ಅಭಾವ ಇದೆ. ಹಣದ ಅಭಾವದಿಂದ ತೆಗೆದುಕೊಂಡಿಲ್ಲ. ಈ ಕೆಲಸ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಮಲ್ಲಪ್ಪ.—ಈ ಸೇತುವೆ ನಿರ್ಮಿಸುವುದರಿಂದ ಜನರಿಗೆ ಬಹಳ ಅನುಕೂಲ ವಾಗುವುದು, ದಯವಿಟ್ಟು ಈ ಸೇತುವೆ ಕೆಲಸ ತೆಗೆದುಕೊಳ್ಳಬೇಕು.

ಶ್ರೀ ಬನವರಾಜ ಮಾಗಾವಿ.— ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಮಲ್ಲಪ್ಪ.—ಎರಡನೆಯ ಪ್ರಶ್ನೆಗೆ ಕೊಟ್ಟಿರುವ ಉತ್ತರ ಬಹಳ ವಿಚಿತ್ರವಾಗಿದೆ. 'ಇಲ್ಲ'' ಎಂದು ಹೇಳಿದೆ. ಹಾಗಾದರೆ ವ್ಯವಸಾಯಗಾರರಿಗೆ ಕಷ್ಟ ಇದೆ ಎಂದು ಹೇಳಿದರೆ ಅವರಿಗೆ ಸಹಾಯ ಮಾಡಬಾರದು ಎಂಬುದು ನಿಮ್ಮ ಉದ್ದೇಶವೇ ?

ಶ್ರೀ ಬನವರಾಜ ಮಾಗಾವಿ.—ಹಾಗಲ್ಲ. ಹಣದ ಅಭಾವದಿಂದ ಮಾಡಿಲ್ಲ.

Milk Dairy Project at Birur

165. Sri K. M. THAMMAIAH (Kadur).—

Will the Minister of State for Veterinary Services, Animal Husbandry and Dairy Development be pleased to state :—

(*a*) whether Government has a proposal before it to open a Milk Dairy at Birur Amrithmahal Kaval in Chickmagalur District ;

(*b*) if so, the estimated cost of the Project ?

Sri G. B. SHANKAR RAO (Minister of State for Veterinary Services, Animal Husbandry and Dairy Development).—

(*a*) No.

(*b*) Does not arise.

ಶ್ರೀ ಕೆ. ಎಂ. ತಮ್ಮಯ್ಯ.—ನಮ್ಮ ರಾಜ್ಯದಲ್ಲಿ 19 ಜಿಲ್ಲೆಗಳಿವೆ. ಎಷ್ಟು ಜಿಲ್ಲೆಗಳಲ್ಲಿ ಡೈರಿ ಫಾರಂ ಇಲ್ಲ ಎಂಬುದನ್ನು ಹೇಳುತ್ತೀರಾ ?

† ಶ್ರೀ ಜಿ. ಬಿ. ಶಂಕರರಾವ್.—ಜಿಲ್ಲಾವಾರು ಡೈರಿ ಫಾರಂ ಮಾಡಿಲ್ಲ.

ಶ್ರೀ ಕೆ. ಎಂ. ತಮ್ಮಯ್ಯ.—ಚಿಕ್ಕಮಗಳೂರಿನಲ್ಲಿ ಹಾಲಿನ ಡೈರಿ ಮಾಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಜಿ. ಬಿ. ಶಂಕರರಾವ್ .—50 ಸಾವಿರ ಪ್ರಜಾ ಸಂಖ್ಯೆ ಇರುವ ದೊಡ್ಡ ನಗರಗಳಲ್ಲಿ ಮಾತ್ರ ಮಿಂಕ್ ಡೈರಿ ಮಾಡಬೇಕು ಎಂದು ನಾವು ನೀತಿ ಯೋಜನೆಯಲ್ಲಿ ಗುರಿ ಇಟ್ಟುಕೊಂಡಿದ್ದೇವೆ.

ಶ್ರೀ ಎಂ. ನಾಗಪ್ಪ.—ದೊಡ್ಡ ನಗರ ಎಂದರೆ ಪಾಪ್ಯುಲೇಷನ್ ಬೇಸಿಸ್ ಇಟ್ಟುಕೊಂಡಿದ್ದೀರಾ? ಎಷ್ಟು ಪಾಪ್ಯುಲೇಷನ್ ಇದ್ದರೆ ದೊಡ್ಡ ನಗರ ಎಂದು ಪರಿಗಣಿಸುತ್ತೀರಿ ? ಪ್ರತಿಯೊಂದು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸಿನವರಾದರೂ ಪ್ರಾರಂಭ ಮಾಡಲು ಪ್ರಯತ್ನಮಾಡುತ್ತೀರಾ ?

† Indicates that the remarks or speeches have not been revised by the member concerned.

Sri G. B. SHANKAR RAO.—We have got a limit for this. We have a programme under the Fourth Plan for setting up dairies in cities having a population of 50,000 and above. I know there are cities with a population of 50,000 and above but it is not possible to set up dairies in all of them. Wherever there is acute shortage of milk, Government have decided to set up 4 or 5 dairies in the Fourth Plan and one of them will be in Raichur.

Sri M. M. JALIGSATGI.—What is the basis for starting a dairy farm ?

ಶ್ರೀ ಜಿ. ಬಿ. ಶಂಕರರಾವ್.—50 ಸಾವಿರ ಪ್ರಜಾ ಸಂಖ್ಯೆ ಇರುವ ನಗರಗಳಲ್ಲಿ ಅವಶ್ಯಕತೆ ಇದ್ದಲ್ಲಿ ಪ್ರಾರಂಭ ಮಾಡಲು ಪ್ರಯತ್ನ ಮಾಡಬೇಕು ಎಂದು ನಾಲ್ಕನೇ ಯೋಜನೆಯಲ್ಲಿ ಒಂದು ಗುರಿ ಇದೆ ಎಂದು ಹೇಳಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ಹಾಗಾದರೆ ಪ್ರತಿಯೊಂದು ಜಿಲ್ಲೆಯಲ್ಲಿ ಡೈರಿ ಫಾರಂ ಪ್ರಾರಂಭಿಸುವ ಕಾರ್ಯಕ್ರಮ ಕೈಕೊಂಡಿದ್ದೀರಾ ?

ಶ್ರೀ ಜಿ. ಬಿ. ಶಂಕರರಾವ್.—ತಳಿ ಅಭಿವೃದ್ಧಿ ಯೋಜನೆಗಳ ಕಾರ್ಯಕ್ರಮದ ಬಗ್ಗೆ ಪ್ರತಿ ಯೊಂದು ಜಿಲ್ಲೆಯಲ್ಲಿ ಕೇಂದ್ರ ಪ್ರಾರಂಭ ಮಾಡಲು ಯೋಚನೆ ಮಾಡುತ್ತೇನೆ.

ಶ್ರೀ ಎಚ್. ಬಿ. ಹಾಲಪ್ಪಯ್ಯ.—ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ಯಾವ ಯಾವ ಸ್ಥಳದಲ್ಲಿ ಮಿಲ್ಕ್ ಡೈರಿ ಪ್ರಾರಂಭ ಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—4ನೇ ಪಂಚವಾರ್ಷಿಕ ಯೋಜನೆಯಲ್ಲಿ ರೂರರ್ ಡೈರಿ ಸೆಂಟರ್ಸ್ ಮಾಡಬೇಕು. 50 ಸಾವಿರಕ್ಕಿತ ಹೆಚ್ಚು ಪ್ರಜಾಸಂಖ್ಯೆ ಇರುವ 4–6 ಸ್ಥಳಗಳಲ್ಲಿ ಮಾಡಬೇಕು ಎಂದು ಯೋಚಿಸಿದ್ದೇವೆ. ಆ ಸ್ಥಳಗಳು ಯಾವುವು ಎಂದರೆ ರಾಯಚೂರು, ಹಾಸನ, ಬಿಜಾಪುರ ಮತ್ತು ಬಳ್ಳಾರಿ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—50 ಸಾವಿರ ಪ್ರಜಾ ಸಂಖ್ಯೆಗಿಂತ ಹೆಚ್ಚು ಇದ್ದ ಕಡೆ ಡೈರಿ ಪ್ರಾರಂಭ ಮಾಡುವ ನೀತಿ ಇದೆಯೆಂದು ಮಾನ್ಯ ಮಂತ್ರಿಗಳು ಹೇಳಿದರು. ಮಲೆನಾಡು ಪ್ರದೇಶದಲ್ಲಿ ಅಂದರೆ ದಕ್ಷಿಣ ಕನ್ನಡ ಜಿಲ್ಲೆ ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರಜಾಸಂಖ್ಯೆ ಬಲ ಕಡಿಮೆ. ಆದುದರಿಂದ ಅಂತಹ ಜಿಲ್ಲೆಗಳಿಗೆ ಏನಾದರೂ ರಿಯಾ ಯಿತಿ ತೋರಿಸಿ ಡೈರಿ ಫಾರಂನಿಂದ ಹೆಚ್ಚು ಹಾಲು ದೊರೆಯುವಂತೆ ಹೊಸ ಯೋಜನೆ ಮಾಡು ತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಹಾಲನ್ನು ಉತ್ಪನ್ನ ಮಾಡಿ ಎಲ್ಲಾ ಕಡೆಗಳಲ್ಲೂ ಸರ್ಕಾರದವರೇ ಜನಗಳಿಗೆ ಹಂಚಬೇಕು ಎನ್ನುವುದು ಸರ್ಕಾರದ ಉದ್ದೇಶವಲ್ಲ. ಕಾರ್ಮಿಕರ ಸಂಖ್ಯೆ ಎಲ್ಲ ಬೆಳೆ ಯುತ್ತಾ ಇದೆ ಆ ನಗರಗಳಲ್ಲಿ ಸರ್ಕಾರದವರೇ ಗ್ರಾಮಾಂತರ ಜನರಿಂದ ಉತ್ಪಾದಿತ ಹಾಲನ್ನು ಹಂಚಬೇಕು ಎನ್ನುವ ಉದ್ದೇಶ ಇಟ್ಟುಕೊಂಡಿದೆ. ಆದರೆ ಸಣ್ಣ ನಗರಗಳಲ್ಲಿ ಜನಗಳು ಹಾಲು ಉತ್ಪನ್ನಮಾಡಲು ಮುಂದೆ ಬಂದರೆ ಅದಕ್ಕೆ ಸರ್ಕಾರ ಸಹಾಯ ಮಾಡುತ್ತದೆ.

ಶ್ರೀ ಎಂ. ಸುಬ್ಬಪ್ಪ.—ಸ್ವಾಮಿ, ಕಡೂರು–ಬೀರೂರು ಪ್ರಜಾ ಸಂಖ್ಯೆ 30 ಸಾವಿರ ಇದೆ ನೀವು ಹೇಳಿದತರಹದಲ್ಲಿ 50 ಸಾವಿರ ಪ್ರಜಾಸಂಖ್ಯೆ ಇರುವ ಕಡೆ ಡೈರಿ ಫಾರಂ ಮಾಡುತ್ತೇವೆಂದು ಹೇಳಿದಿರಿ. ಕಡೂರು ಬೀರೂರು ಮಧ್ಯೆ 800 ಎಕರೆ ಜಮೀನು ಇದೆ. ಆ ಜಮೀನಲ್ಲಿ ಫಾರಂ ಮಾಡಿದರೆ ಇದು ಎಕಾನಮಿಕ್ ಆಗಿ ಆಗುತ್ತದೆ. ಅಲ್ಲಿ ಉತ್ತಮವಾದ ತಳಿಗಳನ್ನು ತಯಾರಿಸಿ ಲಾಭ ದಾಯಕ ರೀತೀಲಿ ಮಾಡಬಹುದು ಎಂದು ನನ್ನ ಸ್ನೇಹಿತರು ಅಭಿಪ್ರಾಯ ಪಟ್ಟಿದ್ದಾರೆ. ತಜ್ಞರೂ ಅಭಿಪ್ರಾಯ ಪಟ್ಟಿದ್ದಾರೆ. ಆದುದರಿಂದ ಸರ್ಕಾರದವರು ಒಂದು ಡೈರಿ ಫಾರಂ ಸ್ಥಾಪನೆ ಮಾಡಿ ದರೆ ಇಡೀ ಜಿಲ್ಲೆಗೆ ಅನುಕೂಲ ಮಾಡಿದಂತಾಗುತ್ತದೆ. ಮತ್ತು ಹೆಚ್ಚು ಹಾಲು ಉತ್ಪತ್ತಿಯಾಗಿ ಭದ್ರಾವತಿಗೂ ಕೂಡ ಕಳುಹಿಸಬಹುದು. ಇದನ್ನು ಏತಕ್ಕೆ ಮಾಡಬಾರದು ?

Sri G. B. SHANKAR RAO.—I have already made it clear that there is difference between milk dairy and dairy farm. It is not possible to have a milk dairy in each place. I know this economic farm having more than

(SRI G. B. SHANKAR RAO)

thousand acres and being made use of for raising bull calves. We may place some exotic bulls at the farm. We have got a cross-breeding programme, by which the cross bred stock is distributed to farmers for further breeding in the area round about.

ಶ್ರೀ ಅಬ್ದುಲ್ ಖದ್ದೂಸ್ ಅನ್ಸಾರ್.—ಈಗತಾನೇ ಹೇಳಿದಿರಿ 50,000 ಪಾಪ್ಯುಲೇಷನ್ ಇದ್ದ ಕಡೆ ಡೈರಿಮಾಡುವುದು, ಎಂದು. ಮುರ್ಕರಾದಲ್ಲಿ 15 ಸಾವಿರ ಪಾಪ್ಯುಲೇಷನ್ ಇದೆ. ಅಂಥ ಸ್ಥಳಕ್ಕೆ ಏತಕ್ಕೆ ಕೊಟ್ಟಿರಿ ?

ಶ್ರೀ ಜಿ. ಬಿ. ಶಂಕರರಾವ್.—ಮುರ್ಕರಾಕ್ಕೆ ಈಚೆಗೆ ಕೊಟ್ಟದ್ದಲ್ಲ. ಅರ್ಸ್ಟ್ವೈರ್ ಕೋರ್ಸ್ ಇದ್ದಾಗಲೇ ಆ ಸರ್ಕಾರದವರು ಮಿಲ್ಕ್ ಡೈರಿ ಮಾಡಿಕೊಂಡಿದ್ದರು. ಹಿಂದೆ ಇದ್ದುದನ್ನೇ ಕಂಟಿನ್ಯೂ ಮಾಡಿಕೊಂಡು ಬರುತ್ತಿದ್ದೇವೆ.

ಶ್ರೀ ಎ. ಆರ್. ಬದ್ರಿನಾರಾಯಣ್.—ಹಳ್ಳಿಗಾಡಿನ ಪ್ರದೇಶಗಳಲ್ಲಿ ಜಾನುವಾರುಗಳನ್ನು ಸಾಕು ಮಾಡಿ, ಸಾಕಷ್ಟು ಅನುಭವ ಇದ್ದಂಥ ಜನಗಳು ಇದ್ದರೆ ಅವರಿಗೇನಾದರೂ ಸಬ್ಸಿಡೈಸ್ ಮಾಡಿ ಫಾರಂ ಮಾಡುವುದಕ್ಕೆ ಏನಾದರೂ ಅವಕಾಶ ಮಾಡಿಕೊಡುವಂತೆ ಅಂತಹ ಪ್ಲಾನ್ ಸರ್ಕಾರದಲ್ಲಡೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಅಂತಹ ಯೋಜನೆ ಸರ್ಕಾರದಲ್ಲಿಲ್ಲ. ಅದರಲ್ಲಿ ಅನುಭವ ಇದ್ದು ಆನಕ್ಕಿ ಹೊಂದಿರುವವರು ತಳಿ ಅಭಿವೃದ್ಧಿ ಮಾಡಬೇಕೆಂದಿದ್ದರೆ ಗರ್ಭಧಾರಣೆ ಮುಖಾಂತರ ಮಿಶ್ರತಳಿ ಅಭಿವೃದ್ಧಿ ಯೋಜನೆಗೆ ಸರ್ಕಾರ ಸಹಾಯ ಮಾಡುತ್ತದೆ. ಸಬ್ಸಿಡಿ ಮುಖಾಂತರ ಜಾನುವಾರುಗಳನ್ನು ಹಂಚುವ ಕಾರ್ಯಕ್ರಮ ಸರ್ಕಾರ ಇಟ್ಟುಕೊಂಡಿಲ್ಲ.

ಶ್ರೀ ಎನ್. ಎ. ಚನ್ನೇಗೌಡ.—ತಾವು ಹೇಳಿದಿರಿ 50 ಸಾವಿರ ಪ್ರಜಾಸಂಖ್ಯೆ ಇರುವ ಕಡೆ ಮಾತ್ರ ಮಿಲ್ಕ್ ಡೈರಿ ಮಾಡುತ್ತೇವೆ ಎಂದು. ಐ. ಎ. ಡಿ. ಪಿ. ಇರತಕ್ಕಂಥ ಜಿಲ್ಲೆಗಳಲ್ಲಿ ಸಣ್ಣ ಹಳ್ಳಿಗಳಲ್ಲೂ ಕೂಡ ಹಾಲಿನ ಅಭಾವ ಜಾಸ್ತಿಯಾಗಿದೆ. ಇಂತಹ ಸಣ್ಣ ಹಳ್ಳಿಗಳು ಇರುವ ಕಡೆ ಏನಾದರೂ ಆಲ್ಟರ್‌ನೇಟೀವ್ ಪ್ಲಾನ್ ಮಾಡಿ ಹಾಲು ಸರಬರಾಜು ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಮೈಸೂರು ರಾಜ್ಯದಲ್ಲಿ ಹಾಲು ಉತ್ಪಾದನೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆ. ಅದು ಆಗಬೇಕಾದರೆ ತಳಿಯ ಅಭಿವೃದ್ಧಿ ಆಗಬೇಕು. ಅದಾದಮೇಲೆ ಹೆಚ್ಚು ಹಾಲು ಕೊಡತಕ್ಕಂಥ ಹಸುಗಳು ಉತ್ಪಾದನೆ ಆಗಬೇಕು. ಅದಕ್ಕೆ ತಕ್ಕಂಥ ಬೀಜದ ಪೋರಿಗಳನ್ನು ಮತ್ತು ಕೃತಕವೀರ್ಯ ಸೆಂಟರುಗಳನ್ನು ಇಡಬೇಕು. ಕೃತಕ ವೀರ್ಯದಿಂದ ಒಳ್ಳೆಯ ಹಸುಗಳು ಆಗಬೇಕು. ಆ ಹಸುಗಳಿಂದ ಹಾಲಿನ ಉತ್ಪಾದನೆ ಆಗಬೇಕು. ರೈತರು ಹೆಚ್ಚು ಹಾಲು ಉತ್ಪನ್ನ ಮಾಡಬೇಕು. ಇದನ್ನು ಸರ್ಕಾರ ದೇಶಾದ್ಯಂತ ಮಾಡುವುದಕ್ಕೆ ಸಾಧ್ಯ ಇಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಕಡೂರು ಬೀರೂರು ಜನಸಂಖ್ಯೆ 50 ಸಾವಿರ ಇದ್ದಮೇಲೆ ಅಲ್ಲಿ ಒಂದು ಮಿಲ್ಕ್ ಡೈರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಆ ಕ್ಷೇತ್ರದಿಂದ ಬಂದಿರತಕ್ಕ ಸದಸ್ಯರೇ ಹೇಳಿದರು ಆ ಎರಡು ನಗರದಲ್ಲಿ 30 ಸಾವಿರ ಜನಸಂಖ್ಯೆ ಇದೆ ಎಂದು. ನಮ್ಮ ರಾಜ್ಯದಲ್ಲಿ 50 ಸಾವಿರಕ್ಕಂತ ಹೆಚ್ಚು ಪ್ರಜಾಸಂಖ್ಯೆ ಇದ್ದರೆ ಅಂತಹ ಒಂದು ಕಡೆ ಮಿಲ್ಕ್ ಡೈರಿ ಮಾಡಬಹುದು. ಇಂತಹ ಸಣ್ಣ ನಗರಗಳಲ್ಲಿ ಮಾಡುವುದಕ್ಕಾಗುವುದಿಲ್ಲವೆಂದು ಮೊದಲೇ ಸ್ಪಷ್ಟ ಪಡಿಸಿದ್ದೇನೆ.

ಶ್ರೀ ಕೆ. ಎಂ. ತಮ್ಮಯ್ಯ.—ನೀವು ಮಿಲ್ಕ್ ಡೈರಿಯೇ ಬೇರೆ, ಮತ್ತು ಡೈರಿ ಫಾರಂ ಬೇರೆ ಎಂದು ಹೇಳುತ್ತೀರಿ. ಅಮೃತ ಮಹಲ್ ಕಾವಲಿನಲ್ಲಿ ಸಾವಿರಾರು ರಾಸುಗಳು ಇವೆ. ಅಲ್ಲಿ ಡೈರಿ ಫಾರಂ ಮಾಡುವುದಕ್ಕೆ ಕಟ್ಟಿಸಿದ ಬಿಲ್ಡಿಂಗ್ ಹಾಗೆಯೇ ಇದೆ. ಅಲ್ಲಿ ಹೆಚ್ಚು ಕವಾಡಿಗರೂ ಇದ್ದಾರೆ. ಅವರ ಜೀವನಕ್ಕೆ ಹಾಲಿನ ಕಸಬೇ ಒಂದು ಮುಖ್ಯವಾದ ದಾರಿ. ಅವರು ಆ ಹಾಲನ್ನೆಲ್ಲಾ ಹೋಟೇಲಿಗೆ ಕೊಟ್ಟುಬಿಡುತ್ತಾರೆ. ಮತ್ತು ಹೊಟೇಲಿನಲ್ಲಿ ಆ ದುಡ್ಡಿಗೆ ತಿಂಡಿಯನ್ನೂ ತಿಂದುಬಿಡುತ್ತಾರೆ. ಮತ್ತೆ ಅವರಿಗೆ ಸಪ್ಲೈ ಮಾಡುವ ಹಾಲಿನ ದರವೂ ಕಡಿಮೆ. ಆದುದರಿಂದ ಅವರ ಜೀವನಕ್ಕೆ ತೊಂದರೆಯಾಗುತ್ತದೆ. ಅವರ ಒಂದು ಅಭಿವೃದ್ಧಿಗೋಸ್ಕರ ತಾವೇ ಒಂದು ಪ್ರಮಾಣದಲ್ಲಿ, ಹಾಲನ್ನು ತೆಗೆದುಕೊಂಡು ಸರಿಯಾದ ರೇಟು ಕೊಡುವುದಕ್ಕೆ ಏತಕ್ಕೆ ಪ್ರಯತ್ನ ಮಾಡಬಾರದು ?

ಶ್ರೀ ಜಿ. ಬಿ. ಶಂಕರರಾವ್.—ನಮ್ಮದು ಡೈರಿ ಫಾರಂ ಇದೆ. Government have proposed to place some exotic bulls at their disposal so that we can take up cross-breeding programme in the farm and distribute cross-breeding animals to the farmers so that they can also take up cross-breeding programme on a large scale.

Levy Paddy deteriorating in Godowns

175. Sri S. JAYAPRAKASH SHETTY (Brahmavar).—

Will the Minister of State for Food and Civil Supplies be pleased to state :—

(*a*) the quantity of levy paddy collected during the last year in the State ;

(*b*) out of that the quantity of rice distributed during rainy season (lean months) ;

(*c*) whether Government is aware of the fact that large quantities of foodgrains are deteriorating in several godowns for want of distribution ;

(*d*) the number of godowns in Udipi taluk where rice is in stock for want of distribution during 1968-69 together with the quantity of rice in stock ?

Sri B. VITHALDAS SHETTY (Minister of State for Food and Civil Supplies).—

(*a*) 1,01,760 tonnes.

(*b*) In addition to the regular quota of 6,899 tonnes of rice per month a quantity of 85 tonnes per month was allotted during lean months of the year from September to end of December 1969.

(*c*) No such large scale deterioration has been reported.

(*d*) No rice is remaining undistributed in the godowns of Udipi taluk.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—(ಇ)ಗೆ ಉತ್ತರವಾಗಿ ಆ ರೀತಿ ಹೆಚ್ಚು ಪ್ರಮಾಣದಲ್ಲಿ ನಾಶವಾಗುತ್ತಿರುವುದು ವರದಿಯಾಗಿಲ್ಲ ಎಂದು ಹೇಳಿದ್ದಾರೆ. ಸಾಮಾನ್ಯವಾಗಿ ಕಡಿಮೆ ಪ್ರಮಾಣದಲ್ಲಿ ನಾಶವಾಗಿದ್ದರೆ, ಅದರ ನಷ್ಟ ಎಷ್ಟಾಗಿದೆ ಎಂದು ಹೇಳುತ್ತೀರಾ ?

† ಶ್ರೀ ಬಿ. ವಿಠಲದಾಸ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನೂ ಡ್ಯಾಮೇಜ್ ಆಗಿಲ್ಲ. ಬೆಂಗಳೂರಿನಲ್ಲಿ ವೀಟ್ ಡ್ಯಾಮೇಜ್ ಆಗಿದೆ ಮತ್ತು ಬಿಜಾಪುರ ಮತ್ತು ಧಾರವಾಡದಲ್ಲಿ ಈ ಎರಡು ಜಿಲ್ಲೆಗಳಲ್ಲಿ ಮಾತ್ರ ಸ್ವಲ್ಪ ಡ್ಯಾಮೇಜ್ ಆಗಿದೆ.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—ಇದೇ ಉಡುಪಿ ತಾಲ್ಲೂಕಿನಲ್ಲಿ 4-5 ಕೋ ಆಪರೇಟೀವ್ ಸೊಸೈಟಿಗಳಲ್ಲಿ 450 ಕ್ವಿಂಟಾಲ್ ಅಷ್ಟು ಹಾಳಾಗಿದೆ ಎಂದು ನನಗೆ ಗೊತ್ತಿದೆ. ಅದು ನಿಜವೇ ?